**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:65:ಯುಜಿಸಿ:ಬಾಬಿ:ಆಯವ್ಯಯ:2016-17 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:17-01-2017

**ಸುತ್ತೋಲೆ**

**ವಿಷಯ:** ಯುಜಿಸಿ 6ನೇ ವೇತನ ಆಯೋಗ ಜಾರಿ ಮಾಡಿದ ವೇತನ ಶ್ರೇಣಿಯ ಹಿಂಬಾಕಿಯನ್ನು ಕಛೇರಿ/ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಪಾವತಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ:65:ಯುಜಿಸಿ:ಬಾಬಿ ಆಯವ್ಯಯ: 2016-17 ದಿನಾಂಕ:23-8-2016 & 17-10-2016

* * * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಛೇರಿಯ ಉಲ್ಲೇಖಿತ ದಿನಾಂಕ:23-8-2016 & 17-10-2016ರ ಸುತ್ತೋಲೆಯಲ್ಲಿ ಕೇಂದ್ರ ಕಛೇರಿ/ಪ್ರಾದೇಶಿಕ ಕಛೇರಿ ಹಾಗೂ ಯೋಜನೆ/ಯೋಜನೇತರಡಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ದಿನಾಂಕ:1-1-2006ರೊಳಗೆ ನೇಮಕಾತಿ ಹೊಂದಿದ ಅರ್ಹ ಬೋಧಕ ಸಿಬ್ಬಂದಿಗಳಿಗೆ 2006ರ ಯುಜಿಸಿ ಹಿಂಬಾಕಿಯನ್ನು ಪಾವತಿಸಲು ಅನುಕ್ರಮವಾಗಿ ರೂ.3350.00 ಮತ್ತು ರೂ.6750.00 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ:2202-03-103-2-1-002ರಡಿಯಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.

ಆದರೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯ ಮತ್ತು ಯೋಜನೆಯಡಿಯಲ್ಲಿ ಬರಲಿರುವ ಕೆಲವು ಕಾಲೇಜುಗಳು ಯುಜಿಸಿ ಬಾಕಿಯನ್ನು ಕ್ಲೇಮು ಮಾಡಲು ಸಾಧ್ಯವಾಗಿಲ್ಲದಿರುವುದು ತಿಳಿದುಬಂದಿರುತ್ತದೆ. ಆದ್ದರಿಂದ ಬಾಕಿ ಕ್ಲೇಮು ಮಾಡಲು ಸಾಧ್ಯವಾಗಿಲ್ಲದಿರುವುದಕ್ಕೆ ಸ್ಪಷ್ಟ ಕಾರಣ ಹಾಗೂ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಈ ಕುರಿತು ಮಾಹಿತಿಯನ್ನೊಳಗೊಂಡ ಹಾರ್ಡ್ ಪ್ರತಿಯನ್ನು ಈ ಕಛೇರಿಗೆ ಮತ್ತು ಮತ್ತು ಸಾಫ್ಟ್ ಪ್ರತಿಯನ್ನು ಈ ಕಛೇರಿಯ ಇ-ಮೇ ವಿಳಾಸ dce.2006ugc@gmail.comಗೆ ದಿನಾಂಕ:20-01-2017ರೊಳಗೆ ಸಲ್ಲಿಸಲು ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಯೋಜನೆ ಮತ್ತು ಯೋಜನೇತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ಅಧಿಕಾರಿಗಳು: ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲು.

# ನಮೂನೆ

| ಕ್ರ ಸಂ | ಕಛೇರಿ/ಕಾಲೇಜಿನ ಹೆಸರು | ಅಧಿಕಾರಿ/ ಸಿಬ್ಬಂದಿಯ ಹೆಸರು | ಬಾಕಿ ಅವಧಿ | | ಬಾಕಿ ಮೊತ್ತ | ಷರಾ |
|---|---|---|---|---|---|---|
| | | | ಇಂದ | ವರೆಗೆ | | |
| | | | | | | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವರೆ ಅಥವಾ ನಿವೃತ್ತರೆ ಎಂಬ ಮಾಹಿತಿಯನ್ನು ನೀಡುವುದು |
| | | | | | | |

ಸಹಿ/-
ಜಂಟಿ ನಿರ್ದೇಶಕರು/ಪ್ರಾಂಶುಪಾಲರು